ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಪ್ರಾಥಮಿಕ ಆರೋಗ್ಯ ಕೇಂದ್ರ ಅರೇಹಳ್ಳಿಯನ್ನು ಸಮುದಾಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು 2007ರಲ್ಲಿ ಆದೇಶ ಹೊರಡಿಸಲಾಗಿದೆ.

ಆ) ಅರೇಹಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 6 ಹಾಸಿಗೆಗಳಿಂದ 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ 2007 ರಲ್ಲಿ ಮೇಲ್ದರ್ಜೆಗೇರಿಸಲಾಗಿದ್ದರೂ, ಸಮುದಾಯ ಆರೋಗ ಕೇಂದ್ರದ ಕಟ್ಟಡ ಕಾಮಗಾರಿಯನ್ನು ತೆಗೆದುಕೊಂಡಿರುವುದಿಲ್ಲ. ಪ್ರಸ್ತುತ ಈ ಆಸ್ಪತ್ರೆಯು 6 ಹಾಸಿಗೆಗಳ ಆಸ್ಪತ್ರೆಯಾಗಿದ್ದು, ಅದಕ್ಕನುಗುಣವಾಗಿ ವೈದ್ಯರು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ. ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ಶೇಕಡಾ 60 ರಷ್ಟು ಪೂರ್ಣಗೊಂಡ ನಂತರ ಹೆಚ್ಚುವರಿ ವೈದ್ಯರು, ಸಿಬ್ಬಂದಿ ಹಾಗೂ ಇತರೆ ಸೌಲಭ್ಯವನ್ನು ಪಡೆಯಲು ಈ ಆಸ್ಪತ್ರೆಗೆ ಅರ್ಹತೆ ಲಭಿಸುತ್ತದೆ.

ಇ) ಸರ್ಕಾರದ ಪ್ರಸ್ತುತ ಆದ್ಯತೆ ಪ್ರಕಾರ ಚಾಲ್ತಿಯಲ್ಲಿರುವ ಕಟ್ಟಡ ಕಾಮಗಾರಿಗಳನ್ನು ಪೂರೈಸಬೇಕಾಗಿದೆ. ಆದುದರಿಂದ ಹೊಸ ಕಾಮಗಾರಿ ಗಳನ್ನು ತೆಗೆದುಕೊಂಡಿರುವುದಿಲ್ಲ.

435 ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಸರ್ಕಾರವು ಆರಂಭಿಸಿರುವ ಹಾಗೂ ಆರಂಭಿಸಲಿರುವ ನೂತನ ಯೋಜನೆಗಳಾವುವು;

ಆ) ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿಯಲ್ಲಿ ಕೇವಲ ಅಂಕಗಳನ್ನು ಪರಿಗಣಿಸಿದರೆ ಅಶಕ್ತ ಬಡ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಅನ್ಯಾಯವಾಗುತ್ತಿದೆಯಲ್ಲವೆ;

ಇ) ಆಯ್ಕೆ ಸಮಿತಿ ಜನಪ್ರತಿನಿಧಿಗಳ ನೇತೃತ್ವದಲ್ಲಿ ರಚಿಸುವ ಉದ್ದೇಶ ಸರ್ಕಾರಕ್ಕಿದೆಯೆ?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ :

ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1) **ಮಹಿಳಾ ಕಾನೂನು ಪದವೀಧರರಿಗೆ ಆರ್ಥಿಕ ಸಹಾಯ ಯೋಜನೆ :** ರಾಜ್ಯದಲ್ಲಿ ಹಿಂದುಳಿದ ಕಡುಬಡತನ ಕುಟುಂಬ ಗಳಿಂದ ಬಂದ ಮಹಿಳಾ ಕಾನೂನು ಪದವೀಧರರು ಕಾನೂನು ಆಡಳಿತದಲ್ಲಿ ಸೂಕ್ತ ತರಬೇತಿಯನ್ನು ಪಡೆಯಲು ಅನುವಾಗುವಂತೆ. ಆರ್ಥಿಕ ಸಹಾಯ ನೀಡುವ ಯೋಜನೆ ಯನ್ನು 1995–96ನೇ ಸಾಲಿನಲ್ಲಿ ಜಾರಿಗೆ ತರಲಾಗಿದೆ. ಈ ಯೋಜನೆಯಡಿ ಕುಟುಂಬದ ವಾರ್ಷಿಕ ವರಮಾನ ರೂ.40.000/– ಕ್ಕಿಂತ ಕಡಿಮೆ ಇರುವ ಮಹಿಳಾ ಕಾನೂನು ಪದವೀಧರರಿಗೆ 4 ವರ್ಷಗಳ ಕಾಲ ಮಾಹೆಯಾನ ರೂ.1.000/–ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

2) **ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ :** ಸರ್ಕಾರದ ಇಲಾಖೆಗಳ ಫಲಾನುಭವಿ ಆಧಾರಿತ ಯೋಜನೆಗಳಲ್ಲಿ ಹಾಗೂ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಕಾರ್ಯಕ್ರಮಗಳಿಗೆ ಒದಗಿಸುವ ಸಂಪನ್ಮೂಲಗಳಲ್ಲಿ ಮೂರನೇ ಒಂದು ಭಾಗವನ್ನು ಮಹಿಳೆಯರಿಗೆ ಮೀಸಲಿಡುವುದೇ ಈ ಯೋಜನೆಯ ಉದ್ದೇಶವಾಗಿರುತ್ತದೆ. ಈ ಯೋಜನೆಯನ್ನು ರಾಜ್ಯ ಸರ್ಕಾರವು 1995–96ನೇ ಈ ಯೋಜನೆಯನ್ನು ರಾಜ್ಯ ಸರ್ಕಾರವು 1995–96ನೇ ಸಾಲಿನಿಂದ ಜಾರಿಗೆ ತಂದಿರುತ್ತದೆ.

3) **ನೇರ ನೇಮಕಾತಿಯಲ್ಲಿ ಮಹಿಳೆಯರಿಗೆ ಶೇ. 30ರಷ್ಟು ಮೀಸಲಾತಿ:** ಸರ್ಕಾರದ ಆದೇಶ ಸಂ.ಸಿ.ಆಸುಇ 34 ಸೇನೆನಿ 95 ದಿನಾಂಕ: 6–3–1996 ರನ್ವಯ ಸರ್ಕಾರಿ ಹಾಗೂ ಅರೆ ಸರ್ಕಾರಿ ಹುದ್ದೆಗಳ ನೇರ ನೇಮಕಾತಿಯಲ್ಲಿ ಶೇ.30 ರಷ್ಟನ್ನು ಮಹಿಳೆಯರಿಗೆ ಮೀಸಲಿಡಲಾಗುತ್ತಿದೆ.

4) **ಸ್ತ್ರೀಶಕ್ತಿ** : ಗ್ರಾಮಾಂತರ ಪ್ರದೇಶದ ಮಹಿಳೆಯರ ಸಮಗ್ರ ಅಭಿವೃದ್ಧಿಗಾಗಿ 2000–01ನೇ ಸಾಲಿನಿಂದ ಸ್ತ್ರೀಶಕ್ತಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ರಾಜ್ಯದಲ್ಲಿ ಈವರೆಗೂ ರೂ.1.40 ಲಕ್ಷ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಿದ್ದು, ಇದರಲ್ಲಿ ರೂ.20.73 ಲಕ್ಷ ಮಹಿಳಾ ಸದಸ್ಯರಿರುತ್ತಾರೆ. ಈ ಸ್ತ್ರೀಶಕ್ತಿ ಗುಂಪುಗಳ ಒಟ್ಟಾರೆ ಉಳಿತಾಯ ರೂ.734.75 ಕೋಟಿ.

ನೂತನ ಯೋಜನೆಗಳು ಯಾವುದನ್ನೂ ಆರಂಭಿಸಿರುವುದಿಲ್ಲ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ : ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು ಹಾಗೂ ನೂತನ ಯೋಜನೆಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಇಲ್ಲ. ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆಯಲ್ಲಿ ಅಂಗನವಾಡಿ ಕೇಂದ್ರವನ್ನು ಪ್ರಾರಂಭಿಸಲಾಗುವ ಪ್ರದೇಶದಲ್ಲಿ ವಾಸಿಸುತ್ತಿರುವ ಸ್ಥಳೀಯ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು. ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆಯಲ್ಲಿ ತಾರತಮ್ಯವನ್ನು ತಡೆಗಟ್ಟುವ ಸಲುವಾಗಿಯೇ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ಅಲ್ಲದೆ ಈ ಹುದ್ದೆಗೆ ಎಸ್.ಎಸ್.ಎಲ್.ಸಿ. ಕನಿಷ್ಠ ವಿದ್ಯಾರ್ಹತೆ ನಿಗದಿ ಪಡಿಸಲಾಗಿದೆ. ಸದರಿ ವಿದ್ಯಾರ್ಹತೆ ಹೊಂದಿದೆ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ ಎಸ್.ಎಸ್.ಎಲ್.ಸಿ. ಅನುತ್ತೀರ್ಣರಾದವರು/ ಕನಿಷ್ಠ 8ನೇ ತರಗತಿ ತೇರ್ಗಡೆಯಾಗಿರಬೇಕು. ಹಾಗೂ ಅಶಕ್ತ ಮಹಿಳೆಯರಿಗೆ ಆದ್ಯತೆ ನೀಡುವ ಸಲುವಾಗಿ ಅಂಗವಿಕಲರು/ ವಿಧವೆಯರು/ ಪರಿತ್ಯಕ್ತೆಯರು/ ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸಂಸ್ಥೆಗಳಲ್ಲಿ ಆಶ್ರಯ ಪಡೆದವರು ಮತ್ತು ಹಾಲಿ ಮತ್ತು ಮಾಜಿ ದೇವದಾಸಿಯರು/ಪರಿಶಿಷ್ಟ ಜಾತಿ/ಪಂಗಡ ಅಭ್ಯರ್ಥಿಗಳಿಗೆ 5 ಬೋನಸ್ ಅಂಕ ನೀಡಲಾಗುವುದು.

ಶೇಕಡ 40ಕ್ಕಿಂತ ಹೆಚ್ಚಾದ ಪರಿಶಿಷ್ಟ ಜಾತಿ/ಪಂಗಡದವರು ಜನಸಂಖ್ಯೆಯಿರುವ ಮೊಹಲ್ಲಾ/ಕಾಲೋನಿಗಳಲ್ಲಿ ಆ ಸಮುದಾಯಕ್ಕೆ ಸೇರಿದ ಮಹಿಳೆಯರನ್ನು ಶೇಕಡ 25 ಕ್ಕಿಂತ ಹೆಚ್ಚಾದ ಅಲ್ಪಸಂಖ್ಯಾತರನ್ನು ಒಳಗೊಂಡ ಕಾಲೋನಿ ಮತ್ತು ಮೊಹಲ್ಲಾಗಳಲ್ಲಿ ಆ ಸಮುದಾಯಕ್ಕೆ ಸೇರಿದ ಮಹಿಳೆಯರನ್ನು/ಉರ್ದು ಬಲ್ಲ ಮಹಿಳೆಯರನ್ನು ಆಯ್ಕೆ ಮಾಡಲಾಗುವುದು.

ಹೆಚ್ಚಿನ ವಿದ್ಯಾರ್ಹತೆಯಿದ್ದು ಪಿಯುಸಿ ತೇರ್ಗಡೆ ಹೊಂದಿದ್ದಲ್ಲಿ 2 ಬೋನಸ್ ಅಂಕಗಳು ಹಾಗೂ ಪದವೀಧರರಾಗಿದ್ದಲ್ಲಿ 3 ಬೋನಸ್ ಅಂಕಗಳನ್ನು ನೀಡಲಾಗುವುದು.

ಇ) ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯದಾಗಿದ್ದು ರಾಜ್ಯ ಸರ್ಕಾರವು ಅದನ್ನು ಅನುಷ್ಠಾನಗೊಳಿಸುತ್ತಿದೆ. ಭಾರತ ಸರ್ಕಾರದ ಪತ್ರ ಸಂ.ಎಫ್.ನಂ.1–14/2006–ಸಿಡಿ–I ದಿನಾಂಕ: 28–5–2007ರಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಗೌರವ ಸೇವೆಗೆ ಸೇರಿರುತ್ತಾರೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಗೌರವಧನದ ಆಧಾರದ ಮೇಲೆ ಕ್ಷೇತ್ರ ಮಟ್ಟದಲ್ಲಿ (grass root level workers) ಕಾರ್ಯನಿರ್ವಹಿಸಬೇಕಾಗಿದ್ದು ಇವರ ಆಯ್ಕೆ ಆಯ್ಕೆ ಸಮಿತಿಯ ಪ್ರಕ್ರಿಯೆಯಲ್ಲಿ ವಿಧಾನ ಸಭಾ ಸದಸ್ಯರನ್ನು ತೊಡಗಿಸುವುದು ಸೂಕ್ತವಲ್ಲವೆಂದು ನಿರ್ಧರಿಸಲಾಗಿರುತ್ತದೆ. ಐಸಿಡಿಎಸ್ ಮಾನದಂಡಗಳನ್ವಯ ಜಿಲ್ಲಾ ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಿ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತಿದೆ.

ಪ್ರಸ್ತುತ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಸಮಿತಿಯು ಈ ಕೆಳಕಂಡಂತಿದೆ :

ಅ) ಗ್ರಾಮೀಣ :

1) ಉಪನಿರ್ದೇಶಕರು, ಮಮಅಇ : ಅಧ್ಯಕ್ಷರು
2) ತಾಲ್ಲೂಕು ಪಂಚಾಯತ್ ಅಧ್ಯಕ್ಷರು : ಸದಸ್ಯರು
3) ತಾಲ್ಲೂಕು ಆಡಳಿತ ಆರೋಗ್ಯಾಧಿಕಾರಿ : ಸದಸ್ಯರು
4) ತಾಲ್ಲೂಕು ಸಮಾಜ ಕಲ್ಯಾಣಧಿಕಾರಿ : ಸದಸ್ಯರು
5) ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ : ಸದಸ್ಯರು
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು : ಸದಸ್ಯ ಕಾರ್ಯದರ್ಶಿ

ಆ) ನಗರ ಸಭೆ/ಮಹಾನಗರ ಪಾಲಿಕೆ/ಪಟ್ಟಣ ಪಂಚಾಯತ್ ವ್ಯಾಪ್ತಿಯ ಪ್ರದೇಶಗಳು :

1) ಉಪನಿರ್ದೇಶಕರು, ಮಮಅಇ : ಅಧ್ಯಕ್ಷರು
2) ಆಯುಕ್ತರು/ ಮುಖ್ಯಾಧಿಕಾರಿ ಮಹಾನಗರ ಪಾಲಿಕೆ/ನಗರ ಸಭೆ/ಪಟ್ಟಣ ಪಂಚಾಯತ್ : ಉಪಾಧ್ಯಕ್ಷರು.

3) ನಗರಸಭೆ ಮಹಾನಗರ ಪಾಲಿಕೆ/ಪಟ್ಟಣ ಪಂಚಾಯತ್‌ನ ಆರೋಗ್ಯಾಧಿಕಾರಿಗಳು : ಸದಸ್ಯರು
4) ಆಯಾ ವ್ಯಾಪ್ತಿಯ ಸಮಾಜ ಕಲ್ಯಾಣಧಿಕಾರಿ : ಸದಸ್ಯರು
5) ಆಯಾ ವ್ಯಾಪ್ತಿಯ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಣಾಧಿಕಾರಿ : ಸದಸ್ಯರು
6) ಆಯಾ ವ್ಯಾಪ್ತಿಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು : ಸದಸ್ಯ ಕಾರ್ಯದರ್ಶಿ

ಅನುಬಂಧ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಈ ಕೆಳಗಿನ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.

1. ಉದ್ಯೋಗಿನಿ ಯೋಜನೆ :

➢ ಉದ್ಯೋಗಿನಿ ಯೋಜನೆಯಲ್ಲಿ ಮಹಿಳೆಯರು ಸ್ವಯಂ ಉದ್ಯೋಗ ಹೊಂದಲು, ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳುವ ಉದ್ದೇಶದಿಂದ ಗರಿಷ್ಠ ರೂ.1.00 ಲಕ್ಷ ಆರ್ಥಿಕ ನೆರವನ್ನು ಬ್ಯಾಂಕುಗಳ ವತಿಯಿಂದ ಸಾಲ ಹಾಗೂ ನಿಗಮದಿಂದ ಗರಿಷ್ಠ ರೂ.10.000/–ಗಳ ಸಹಾಯಧನವನ್ನು ನೀಡಲಾಗುತ್ತಿದೆ.

2. ದೇವದಾಸಿ ಪುನರ್ವಸತಿ ಯೋಜನೆ :

➢ ದೇವದಾಸಿ ಪದ್ದತಿಯು ಒಂದು ಸಾಮಾಜಿಕ ಅನಿಷ್ಟ ಪದ್ಧತಿಯಾಗಿದ್ದು ಈ ಅನಿಷ್ಟ ಪದ್ದತಿಯನ್ನು ನಿರ್ಮೂಲನೆ ಗೊಳಿಸಲು ಕ್ರಮ ವಹಿಸಲಾಗುತ್ತಿದೆ. ಮಾಜಿ ದೇವದಾಸಿ ಮಹಿಳೆಯರನ್ನು ಗುರುತಿಸಿ ಅವರ ಸಮಗ್ರ ಅಭಿವೃದ್ಧಿಗಾಗಿ (1) ಆದಾಯ ಉತ್ಪನ್ನಕರ ಚುಟುವಟಿಕೆಯಲ್ಲಿ ತೊಡಗಲು ನಿಗಮದಿಂದ ಶೇಕಡ 50ರಷ್ಟು ಸಹಾಯಧನ ಹಾಗೂ ಬ್ಯಾಂಕುಗಳಿಂದ ಶೇಕಡ 50ರಷ್ಟು ಸಾಲ ಒದಗಿಸಲಾಗುವುದು.

(2) ಅರಿವು ಮೂಡಿಸುವ ಕಾರ್ಯಕ್ರಮ (3) ಆರೋಗ್ಯ ಶಿಬಿರ ಇತ್ಯಾದಿ ಚುಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

3. ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶನ :

➢ 1993–94ನೇ ಸಾಲಿನ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ಮಾಜಿ ದೇವದಾಸಿ ಮಹಿಳೆಯರ ಪೈಕಿ 45 ವರ್ಷ ವಯಸ್ಸು ಮೀರಿದ ಮಾಜಿ ದೇವದಾಸಿಯರಿಗೆ ಅವರ ಕನಿಷ್ಠ ಜೀವನ ನಿರ್ವಹಣೆಗಾಗಿ ಮಾಸಿಕ ರೂ.400/– ರಂತೆ ಮಾಸಾಶನವನ್ನು 2007–08ನೇ ಸಾಲಿನಿಂದ ಜಾರಿಗೊಳಿಸಲಾಗುತ್ತಿದೆ.

4. ಮಹಿಳಾ ತರಬೇತಿ ಯೋಜನೆ :

➢ ಆರ್ಥಿಕವಾಗಿ ಹಿಂದುಳಿದ ಮಹಿಳೆಯರು, ವಿಧವೆಯರು, ನಿರ್ಗತಿಕರು, ಅಂಗವಿಕಲರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗಕ್ಕೆ ಸೇರಿದ ಮಹಿಳೆಯರಿಗೆ ವಿವಿಧ ರೀತಿಯ ಕೌಶಲ್ಯ ತರಬೇತಿಗಳಾದ ಕಂಪ್ಯೂಟರ್ ತರಬೇತಿ, ಬ್ಯೂಟಿ ಪಾರ್ಲರ್, ಉಡುಪು ವಿನ್ಯಾಸ, ಆಹಾರ ಸಂಸ್ಕರಣೆ, ಕೈ ಕಸೂತಿ/ಯಂತ್ರ ಕಸೂತಿ ಮತ್ತು ಹೋಂ ನರ್ಸಿಂಗ್, ಹೌಸ್ ಕೀಪಿಂಗ್ ಇನ್ನೂ ಮುಂತಾದ ತರಬೇತಿಗಳನ್ನು ಉಚಿತವಾಗಿ ಪ್ರತಿಷ್ಠಿತ ಸರ್ಕಾರಿ/ಬ್ಯಾಂಕ್ ಸ್ವಾಮ್ಯದ ತರಬೇತಿ ಸಂಸ್ಥೆಗಳ ಮೂಲಕ ನೀಡಲಾಗುತ್ತಿದೆ.

5. ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆ :

➢ ಸರ್ಕಾರದ ವಿವಿಧ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವ ಹಾದಿಯಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಲಿಂಗತಾರತಮ್ಯ ಕಾರ್ಯಾಗಾರ ಏರ್ಪಡಿಸುವುದು ಮತ್ತು ಮಹಿಳೆಯರಿಗೆ ಸ್ವ ಉದ್ಯೋಗ ಪ್ರಾರಂಭಿಸಲು ಸಲಹೆ ನೀಡುವುದು ಹಾಗೂ ಇತರೆ ಇಲಾಖೆಗಳಲ್ಲಿ ಮಹಿಳೆಯರಿಗೆ ಲಭ್ಯವಿರುವ ಸೌಲಭ್ಯಗಳ ಮಾಹಿತಿ ನೀಡುವುದು. ಈ ಯೋಜನೆಯ ಉದ್ದೇಶವಾಗಿದೆ.

6. ಮಾರುಕಟ್ಟೆ ನೆರವು ಯೋಜನೆ :

➢ ಈ ಯೋಜನೆಯಡಿ ಮಹಿಳಾ ಉದ್ದಿಮೆದಾರರು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಲು ವಸ್ತು ಪ್ರದರ್ಶನಗಳ ಮೂಲಕ ವೇದಿಕೆಯನ್ನು ಕಲ್ಪಿಸಲಾಗುತ್ತದೆ. ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ವರ್ಷಕ್ಕೊಮ್ಮೆ 6 ದಿನಗಳ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳಗಳನ್ನು ಏರ್ಪಡಿಸುವುದರ ಮೂಲಕ ಮಹಿಳಾ ಉದ್ಯಮಿಗಳು ಮತ್ತು ಸಮರ್ಥ ಗ್ರಾಹಕರನ್ನು ಒಂದುಗೂಡಿಸಲು ಅವಕಾಶ ಕಲ್ಪಿಸಲಾಗುತ್ತದೆ. ವರ್ಷಕ್ಕೆ ಒಂದು ಬಾರಿ ರಾಜ್ಯ ಮಟ್ಟದ ವಸ್ತುಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಮಾರ್ಚ್ ತಿಂಗಳಲ್ಲಿ ಬರುವ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಮಯದಲ್ಲಿ ಏರ್ಪಡಿಸಲಾಗುತ್ತಿದೆ.

7. ಆಸರೆ ಯೋಜನೆ :

➢ 2007–08ನೇ ಸಾಲಿನಲ್ಲಿ ಸರ್ಕಾರವು ಘೋಷಿಸಿರುವ ಈ ಯೋಜನೆಯಡಿ ವಿಧವೆಯರಿಗೆ, ಅಸಹಾಯಕ ಮಹಿಳೆಯರಿಗೆ, ಅಂಗವಿಲ ಮಹಿಳೆಯರಿಗೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಮತ್ತು ಅಲ್ಪಸಂಖ್ಯಾತ ಮಹಿಳೆಯರಿಗೆ ಆದ್ಯತೆ ನೀಡುವುದರ ಮೂಲಕ ಮಹಿಳೆಯರು ಸ್ವ ಉದ್ಯೋಗಿಗಳಾಗಿ, ಸ್ವಾವಲಂಬಿಗಳಾಗಲು ಒಟ್ಟು ಯೋಜನಾ ವೆಚ್ಚ ರೂ.2.00 ಲಕ್ಷಗಳವರೆವಿಗೆ ಇರುವ ಆರ್ಥಿಕ ಚುಟುವಟಿಕೆ ಘಕಟಗಳನ್ನು ಪ್ರಾರಂಭಿಸಲು ನಿಗಮದಿಂದ ಸಹಾಯಧನ ರೂ.10.000/– ಗಳವರೆವಿಗೆ ಹಾಗೂ ಅಂಚಿನ ಹಣ (ಮಾರ್ಜಿನ್ ಮನಿ) ರೂ.25.000/–ಗಳವರೆವಿಗೆ ಸಾಲ ಸೌಲಭ್ಯವನ್ನು ಶೇಕಡ 4ರ ಬಡ್ಡಿ ದರದಲ್ಲಿ ಮತ್ತು ಯೋಜನಾ ವೆಚ್ಚದ ಉಳಿದ ಹಣವನ್ನು ಬ್ಯಾಂಕ್‌ಗಳ ಮೂಲಕ ಒದಗಿಸುವುದಾಗಿರುತ್ತದೆ.

ನೂತನ ಯೋಜನೆ :

ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ಯೋಜನೆ :

➢ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ವಿಶೇಷ ಅಭಿವೃದ್ಧಿ ಕಾರ್ಯಕ್ರಮದ ಮಾಜಿ ದೇವದಾಸಿ ಮಹಿಳೆಯರಿಗೆ

ವಸತಿ ನಿರ್ಮಾಣ ಯೋಜನೆಯನ್ನು ಪ್ರಸಕ್ತ ಸಾಲಿನಿಂದ ಜಾರಿಗೊಳಿಸುತ್ತಿದೆ. ಈ ಯೋಜನೆಯಡಿ ನಿವೇಶನ ಹೊಂದಿದ ವಸತಿ ರಹಿತ ಮಾಜಿ ದೇವದಾಸಿ ಮಹಿಳೆಯರಿಗೆ ರೂ.40.000/– ವೆಚ್ಚದಲ್ಲಿ ವಸತಿಯನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ನಿರ್ಮಿಸಿ ಕೊಡಲು ಕ್ರಮ ಕೈಗೊಳ್ಳಲಾಗಿರುತ್ತದೆ. 2009–10ನೇ ಸಾಲಿನಲ್ಲಿ 2500 ಮನೆಗಳನ್ನು ನಿರ್ಮಿಸುವ ಯೋಜನೆಯಿದೆ.

544 ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್. (ಗುಬ್ಬಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು ಡಾ॥ ಡಿ.ಎಂ. ನಂಜುಂಡಪ್ಪರವರ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿದ್ದು, ಇಲ್ಲಿಗೆ ಐ.ಟಿ.ಐ. ಕಾಲೇಜು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಐ.ಟಿ.ಐ. ಕಾಲೇಜು ಸ್ಥಾಪನೆಗಾಗಿ ಸ್ಥಳ ಗುರುತಿಸಲಾಗಿದೆಯೇ;

ಇ) ಯಾವಾಗಿನಿಂದ ಐ.ಟಿ.ಐ. ಕಾಲೇಜನ್ನು ಪ್ರಾರಂಭಿಸಲಾಗುವುದು;

ಉ) ಐ.ಟಿ.ಐ. ಕಾಲೇಜು ಕಟ್ಟಡದ ನಿರ್ಮಾಣಕ್ಕಾಗಿ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು;

ಊ) ಹಾಗಿದ್ದಲ್ಲಿ, ಐ.ಟಿ.ಐ. ಕಾಲೇಜು ಕಟ್ಟಡದ ಕಾಮಗಾರಿಯು ಯಾವ ಹಂತದಲ್ಲಿದೆ; ವಿವರಗಳನ್ನು ನೀಡುವುದು?

ಶ್ರೀ ಬಿ.ಎಸ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಅನುದಾನದ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವ ಬಗ್ಗೆ ಮುಂದಕ್ಕೆ ಪರಿಶೀಲಿಸಲಾಗುವುದು.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.